**<u>ಸಿವಿಲ್ ನ್ಯಾಯಾಧೀಶರು  ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.</u>**

**<u>ಹಿರೇಕೆರೂರು.</u>**

**<u>ಸಿ.ಸಿ.ನಂಬರ್‌ಃ1022/2021</u>**

ಸಿಡಬ್ಲ್ಯೂಃ1

ಪಿಡಬ್ಲ್ಯೂಃ1

| | | |
|---|---|---|
| ಸಾಕ್ಷಿಯ ಹೆಸರು | : | ಅರುಣಕುಮಾರ ಕಾರಗಿ |
| ತಂದೆಯ ಹೆಸರು | : | ಶಂಕ್ರಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಚುನಾವಣಾ ತಹಶೀಲ್ದಾರ,ದಾವಣಗೆರೆ |
| ವಾಸಸ್ಥಳ | : | ದಾವಣಗೆರೆ |

ಇಂದು ದಿನಾಂಕಃ02.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**<u>ಮುಖ್ಯ ವಿಚಾರಣೆಃ</u>** ಮಾನ್ಯ ಎಪಿಪಿಯವರಿಂದಃ

ನಾನು 2013-14 ರಿಂದ 2021 ರವರೆಗೂ ಆಹಾರ ಶಿರಸ್ತೇದಾರ ತಹಶೀಲ್ದಾರ ಕಚೇರಿ ಹಿರೇಕೆರೂರ ಎಂಬಲ್ಲಿ  ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 21-11-2019 ರಂದು ನಾನು ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ಬೆಳಿಗ್ಗೆ 10.30 ಗಂಟೆಯ ಸಮಯಕ್ಕೆ ಚಿಕ್ಕೇರೂರು ಗ್ರಾಮದಿಂದ ಹಿರೇಕೆರೂರು ಗ್ರಾಮಕ್ಕೆ ಒಬ್ಬ ವ್ಯಕ್ತಿ ಸಾರ್ವಜನಿಕರಿಗೆ ವಿತರಿಸಬೇಕಾಗಿದ್ದಂತಹ ಪಡಿತರ ಅಕ್ಕಿಯನ್ನು ಅನಧಿಕೃತವಾಗಿ ಚೀಲದಲ್ಲಿ ಸಂಗ್ರಹಿಸಿಕೊಂಡು ಹೆಚ್ಚಿನ ಬೆಲೆಗೆ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಸಲುವಾಗಿ ಬರುತ್ತಿದ್ದಾರೆ ಎಂದು ನಮಗೆ ಮಾಹಿತಿ ಬಂದಿದ್ದು, ನಂತರ ಸದರಿ ವಿಚಾರವನ್ನು ನಾನು ನನ್ನ ಮೇಲಾಧಿಕಾರಿಯಾಗಿದ್ದಂತಹ ತಹಶೀಲ್ದಾರವರಿಗೆ ಮಾಹಿತಿಯನ್ನು ತಿಳಿಸಿ ನಂತರ ಚಾಸಾ-4 ರವರಿಗೆ ಮಾಹಿತಿಯನ್ನು ತಿಳಿಸಿರುತ್ತೇನೆ. ನಂತರ ಚಾಸಾ-2 ಮತ್ತು 3 ರವರನ್ನು ಪಂಚರಾಗಿ ಸಹಕರಿಸುವಂತೆ ಕೋರಿದ್ದು ಅದರಂತೆ ಅವರು ಒಪ್ಪಿದ ಮೇರೆಗೆ ಅವರನ್ನು ಕರೆದುಕೊಂಡು ಪೋಲಿಸ್ ಜೀಪ್ ನಲ್ಲಿ ನಾನು ಚಾಸಾ-2 ರಿಂದ 6 ರವರನ್ನು ಕೂಡಿ ಚಿಕ್ಕೇರೂರು-ಹಿರೇಕೆರೂರು ರಸ್ತೆಯ ಪಕ್ಕದಲ್ಲಿರುವಂತಹ ಅವಲಕ್ಕಿ ಗೋಡಾನ್ ಬಳಿ ಹೋಗಿದ್ದು, ಸ್ವಲ್ಪ ದೂರದಲ್ಲಿ ಜೀಪನ್ನು ನಿಲ್ಲಿಸಿ ಗಮನಿಸಿದ್ದು, ಆಗ ಸಮಯ 11.45 ಗಂಟೆಯ ಸಮಯಕ್ಕೆ ಅಶೋಕ ಲೈಲ್ಯಾಂಡ್ ಒಂದು ಗೂಡ್ಸ ವಾಹನ ಬಂದಿದ್ದು ಅದರ ನೊಂದಣಿ ಸಂಖ್ಯೆ ಕೆಎ-15 ಎ-4882 ಆಗಿದ್ದು, ಸದರಿ ವಾಹನಕ್ಕೆ ಕೈಯಿಂದ ಸೂಚನೆಯನ್ನು ನೀಡಿ ಅದನ್ನ್ನ ನಿಲ್ಲಿಸಿದೆವು. ಅದರ ಚಾಲಕನು ನಮ್ಮನ್ನು ನೋಡಿ ಓಡಲು

ಪ್ರಯತ್ನಿಸಿದ್ದು ಆಗ ನಾನೇ ಆತನನ್ನು ಬೆನ್ನತ್ತಿ ಹಿಡಿದಿರುತ್ತೇನಿ. ನಂತರ ಸದರಿ ವ್ಯಕ್ತಿಯನ್ನು ವಿಚಾರಿಸಲಾಗಿ ಆತನ ಹೆಸರು ನಿವೃತ್ತಿ ಗಣಪತೆಪ್ಪ ಮಾಳದಕರ ಎಂದು ತಿಳಿಸಿ ನಂತರ ತಾನು ಪಡಿತರಿಗೆ ನೀಡಬೇಕಾಗಿದ್ದ ಅಕ್ಕಿಯನ್ನು ತನ್ನ ವಾಹನದಲ್ಲಿ ಸಂಗ್ರಹಿಸಿಟ್ಟುಕೊಂಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ನಂತರ ಸದರಿ ವಾಹನವನ್ನು ಪರೀಶೀಲಿಸಲಾಗಿ ಅದರಲ್ಲಿ 40 ಕೆಜಿ ಯ 13 ಬ್ಯಾಗ್ ಗಳು ಅದರ ಮೌಲ್ಯ 18,200/- ಆಗುವಷ್ಟು ಅಕ್ಕಿಯನ್ನು ಸಂಗ್ರಹಿಸಿರುವುದು ಕಂಡು ಬಂದಿರುತ್ತದೆ. ನಂತರ ನಾವು ಸದರಿ ಬ್ಯಾಗ್ ಗಳಿಗೆ ಕ್ರಮ 1 ರಿಂದ 13 ಎಂದು ಗುರುತಿಸಿರುತೆತೇವೆ. ನಂತರ ಪ್ರತೀ ಬ್ಯಾಗ್ ನಿಂದಲೂ 2 ಕೆ.ಜಿ ಯಷ್ಟು ಅಕ್ಕಿಯನ್ನು ಸ್ಯಾಂಪಲ್ ಗಾಗಿ ಪ್ರತ್ಯೇಕಿಸಿ ಸ್ಥಳದಲ್ಲಿ 11.45 ರಿಂದ 12.45 ರವರೆಗೆ ಪಂಚನಾಮೆಯನ್ನು ಮಾಡಿ ಅಲ್ಲಿದ್ದಂತಹ ಸಾಕ್ಷಿದಾರರ ಸಹಿಗಳನ್ನು ಸದರಿ ಪಂಚನಾಮೆಗೆ ಪಡೆದುಕೊಂಡಿರುತ್ತೇವೆ. ನಂತರ ಸದರಿ ವಾಹನ ಹಾಗೂ ಅಕ್ಕಿಯನ್ನು ಮುಂದಿನ ಕ್ರಮಕ್ಕಾಗಿ ಪೋಲಿಸರು ವಶಪಡಿಸಿಕೊಂಡಿರುತ್ತಾರೆ. ನಂತರ ಈ ಬಗ್ಗೆ ನಾನು ಪೋಲಿಸರಿಗೆ ದೂರನ್ನು ನೀಡಿರುತ್ತೇನೆ.

2. ದಿನಾಂಕ 16.12.2019 ರಂದು ವಶಪಡಿಸಿಕೊಂಡಂತಹ ಅಕ್ಕಿ ಪಡಿತರಿಗೆ ಸಂಬಂದಪಟ್ಟ ಅಕ್ಕಿ ಎಂದು ದೃಡೀಕರಿಸಿ ಪೋಲಿಸರ ಕೋರಿಕೆಯ ಮೇರೆಗೆ ದೃಡೀಕರಣ ಪತ್ರವನ್ನು ನೀಡಿರುತ್ತೇವೆ ಹಾಗೂ ಸದರಿ ಅಕ್ಕಿಯನ್ನು ನಮ್ಮ ವಶಕ್ಕೆ ಪಡೆದುಕೆಂಡು ನಮ್ಮ ಗೋಡೌನ್ ನಲ್ಲಿ ಸಂಗ್ರಹಿಸಿರುತ್ತೇವೆ. ಸಾಕ್ಷಿಗೆ ಕಡತದಲ್ಲಿರುವ ಪಂಚನಾಮೆಯನ್ನು ತೋರಿಸಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಸದರಿ ದಾಖಲೆಯನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಹಾಗೂ ಸಾಕ್ಷಿಗೆ ಪೊಲಿಸರಿಗೆ ನೀಡಿದ ದೃಡೀಕರಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸಾಕ್ಷಿಯು ಕಡತದಲ್ಲಿರುವ ದೂರು ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಹಾಜರಪಡಿಸಿರುವಂತಹ ಅಕ್ಕಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮುದ್ದೆ ಮಾಲು-1 ಎಂದು ಗುರುತಿಸಲಾಯಿತು. ವಾಹನವನ್ನು ನೋಡಿದರೆ ನಾನು ಗುರುತಿಸುತ್ತೇನೆ. ಆ ದಿನದಂದು ವಾಹನವನ್ನು ಚಾಲನೆ ಮಾಡುತ್ತಿದ್ದಂತಹ ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದು ಅವರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಎಂ ಬಿ ಪಿ ವಕೀಲರಿಂದಃ

ನಿಪಿ-3 ನ್ನು ಠಾಣೆಯಲ್ಲಿಯೇ ತಯಾರಿಸಿರುತ್ತೇವೆ. ಅದನ್ನು ಯಾರು ಬೆರಳಚ್ಚು ಮಾಡಿದರು ಎಂದು ನನಗೆ ಹೇಳಲು ಆಗುವುದಿಲ್ಲ ಆದರೆ ಅದಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಿಪಿ-3 ನ್ನು ದೂರನ್ನು ನಾನು 12.15 ಗಂಟೆಗೆ ದಾಖಲಿಸಿರುತ್ತೇನೆ. ನಾನು ಆಹಾರ ಶಿರಸ್ತೇದಾರರಾಗಿ ಕೆಲಸ

ಮಾಡುವ ಪೂರ್ವದಲ್ಲಿ ಉಪತಹಶೀಲ್ದಾರರಾಗಿ ಕೆಲಸ ನಿರ್ವಹಿಸಿರುತ್ತೇನೆ. ಚಾಸಾ–2 ಮತ್ತು 3 ರವರು ನನ್ನ ಕೈಕೆಳಗೆ ಕೆಲಸ ಮಾಡಿದರು ಎಂದರೆ ಸರಿ. ದಾಳಿ ನಡೆಯುವ ಸಂದರ್ಭದಲ್ಲಿ ಉಪಚುನಾವಣೆ ಇತ್ತು ಎಂದರೆ ಸರಿ. ಸದರಿ ಚುನಾವಣೆಯ ಪ್ರಯುಕ್ತ ಹಿರೇಕೆರೂರ ಎಲ್ಲಾ ಕಡೆ ಪೋಲಿಸ್ ಬಂದೋಬಸ್ತ ಹಾಗೂ ನಾಕಾಬಂದಿ ಇತ್ತು ಎಂದರೆ ಸಾಕ್ಷಿಯು ಕೇವಲ 3 ಕಡೆಗಳಲ್ಲಿ ಮಾತ್ರ ಹಾಕಲಾಗಿತ್ತು ಎಂದು ನುಡಿದಿರುತ್ತಾರೆ. ಆರೋಪಿಗೆ ಚಿಕ್ಕೇರೂರನಲ್ಲಿ ಜನರಲ್ ಸ್ಟೋರ್ ಇರುತ್ತದೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಹೊರವಲಯ ಪೋಲಿಸ್ ಠಾಣೆಗೆ ಹೋಗುವಷ್ಟರಲ್ಲಿ ಪಂಚರು ಅಲ್ಲಿ ಹಾಜರಿದ್ದರು. ಪಂಚನಾಮೆಯನ್ನು ಬರೆಯಲು ನಾವೇ ಮಾಹಿತಿಯನ್ನು ನೀಡಿದ್ದು ಅದನ್ನು ನಮ್ಮ ವಿಲೇಜ್ ಅಕೌಂಟ್ ರವರು ಬರೆದಿರುತ್ತಾರೆ.

2. ನಾವು ನಮ್ಮ ಕಚೇರಿಯಿಂದ ಹೊರಗೆ ಹೋಗಬೇಕಾಗಿದ್ದಲ್ಲಿ ಸಮಾನ್ಯವಾಗಿ ನೋಂದಣಿ ಪುಸ್ತಕದಲ್ಲಿ ನಮೂದಿಸುವುದಿಲ್ಲ ಆದರೆ ಮೆಲಾಧಿಕಾರಿಗಳ ಅನುಮತಿಯನ್ನು ಪಡೆದು ಹೊರಗೆ ಹೋಗುತ್ತೇವೆ. ನಾನು ಮೇಲಾಧಿಕಾರಿಯಿಂದ ಅನುಮತಿ ಪಡೆದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಾನು ವಶಪಡಿಸಿಕೊಂಡಂತಹ ಚೀಲಗಳಲ್ಲಿ ಎಷ್ಟು ಪ್ರಮಾಣದ ಅಕ್ಕಿಯನ್ನು ರಸಾಯನೀಕ ಪರೀಕ್ಷೆಗಾಗಿ ಬೇರ್ಪಡಿಸಿರುತ್ತೇವೆ ಎಂಬುದರ ಬಗ್ಗೆ ನಿಪಿ–1 ರಲ್ಲಿ ನಮೂದಿಸಿರುವುದಿಲ್ಲ. ಸಾಮಾನ್ಯವಾಗಿ ಒಬ್ಬ ರೈತ ಬೆಳೆದಂತಹ ಅಕ್ಕಿಗೂ ಹಾಗೂ ಪಡಿತರ ಅಕ್ಕಿಗೂ ಹೋಲಿಕೆ ಮಾಡಲು ಸಾಧ್ಯವಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣಕ್ಕೆ ಅನೂಕೂಲವಾಗಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿ ತನ್ನ ಗದೆಯಲ್ಲಿ ಬೆಳೆದಂತಹ ಭತ್ತವನ್ನು ಚಿಕ್ಕೇರೂರನಲ್ಲಿರುವ ರೈಸ್ ಮಿಲ್‌ಗೆ ಹೋಗಿ ಅಕ್ಕಿ ಮಾಡಿಸಿಕೊಂಡು ತನ್ನ ವಾಹನದಲ್ಲಿ ತೆಗೆದುಕೊಂಡು ಬರುತ್ತಿರುವಾಗ ನಾವು ದಾಳಿ ಮಾಡಿ ಹಿಡಿದು ಸದರಿ ಅಕ್ಕಿಯನ್ನು ಪಡಿತರ ಅಕ್ಕಿ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಿನಾಂಕ 21–11–2019 ಗುರುವಾರ ಎಂದರೆ ಆ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ಚಿಕ್ಕೇರೂರನಲ್ಲಿ ಪ್ರತಿ ಬುಧವಾರ ಸಂತೆ ನಡೆಯುತ್ತದೆ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿಯ ವಿರುದ್ದ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಆ ದಿನದಂದು ನಾವು ಯಾವುದೇ ಪಂಚನಾಮೆಯನ್ನು ಮಾಡಲಿಲ್ಲ ಹಾಗೂ ಆರೋಪಿಯಿಂದ ಯಾವುದೇ ಅಕ್ಕಿಯನ್ನು ವಶಪಡಿಸಿಕೊಂಡಿದ್ದು ಇಲ್ಲ ಎಂದರೆ ಸರಿಯಲ್ಲ. ಹಾಗೂ ಈ ಪ್ರಕರಣಕ್ಕಾಗಿ ನಿಪಿ–1 ರಿಂದ 3 ಹಾಗೂ ಮುದ್ದೆ ಮಾಲು–1 ನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ಸಾರ್ವಜನಿಕರಿಗೆ ಸೇರಬೇಕಾಗಿದ್ದಂತಹ ಪಡಿತರ ಅಕ್ಕಿಯನ್ನು ಸಾಗಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ–3 ರಂತೆ ದೂರನ್ನು ನೀಡಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಆರೋಪಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು–1 ರ ಮೇಲೆ ಪಂಚನಾಮೆ ಮಾಡುವ ಸಮಯದಲ್ಲಿ ನಾನಾಗಲೀ ಅಥವಾ ಪಂಚರಾಗಲೀ ಸಹಿ ಮಾಡಿರುವುದಿಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.